Date : 24/01/2023

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**– ಮುಖ್ಯ ವಿಚಾರಣೆ – ಶ್ರೀ ಆರ್.ಬಿ. ವಕೀಲರಿಂದ –**

ನಾನು ಈ ಕೇಸಿನಲ್ಲಿ ಅರ್ಜಿದಾರನಿರುತ್ತೇನೆ. ನನ್ನ ಮುಖ್ಯ ಸಾಕ್ಷ್ಯದ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳನ್ನು ನಾನೇ ಹೇಳಿ ಬರೆಸಿದ್ದು, ಅವು ಸತ್ಯವಾಗಿರುತ್ತವೆ ಹಾಗೂ ಅದರಲ್ಲಿರುವ ಸಹಿ ನನ್ನದಾಗಿರುತ್ತದೆ.

ಅರ್ಜಿಗೆ ಮತ್ತು ಮುಖ್ಯ ಸಾಕ್ಷ್ಯಕ್ಕೆ ಪೂರಕವಾಗಿ, ದಿನಾಂಕ 04/05/2019 ರ ಅವಾರ್ಡ್ ನೋಟೀಸು, 2 ಪಹಣಿ ಪತ್ರಿಕೆಗಳು, 2020–21 ನೇ ಸಾಲಿನ ಮಾರುಕಟ್ಟೆ ಬೆಲೆಯ ದೃಢೀಕರಣ ಪತ್ರ, ಸಾಮಾನ್ಯ ಐತೀರ್ಪಿನ ದೃಢೀಕೃತ ಪ್ರತಿ ಮತ್ತು ಅವಾರ್ಡ್ ತಃಖ್ತೆ, ಹಣ ಸಂದಾಯದ ದೃಢೀಕೃತ ಪ್ರತಿ ಹಾಜರುಪಡಿಸಿದ್ದು, ಅವುಗಳನ್ನು ನಿಪಿ–**1** ರಿಂದ ನಿಪಿ–**6** ಎಂದು ಗುರುತಿಸಲಾಯಿತು.

**– ಪಾಟೀ ಸವಾಲು –**

ಎದುರುದಾರರ ಪರ ವಕೀಲರನ್ನು ಪುಕಾರಿಸಲಾಗಿ ಹಾಜರಿಲ್ಲ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ)

*ಓದಿ ಹೇಳಿ ಕೇಳಿ ಸರಿ ಇದೆ.*

*1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
*ಚಿತ್ರದುರ್ಗ.*

ದಿನಾಂಕ 05/06/2023 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**– ಪಾಟೀ ಸವಾಲು – ಎದುರುದಾರರ ಪರವಾಗಿ – ಶ್ರೀ ಜಿ.ಎಸ್.ಎ. ವಕೀಲರಿಂದ –**

ದೊಡ್ಡಗಟ್ಟ ಗ್ರಾಮದ ಸರ್ವೆ ನಂ.74/2 ರಲ್ಲಿ ಸ್ವಾಧೀನಗೊಂಡ 1 ಎಕರೆ 17 ಗುಂಟೆ ಜಮೀನಿನಲ್ಲಿ 8 ಗುಂಟೆ ಸರ್ಕಾರದ ಖರಾಬು ಜಮೀನು ಎಂದರೆ ಸರಿಯಲ್ಲ. ನಮ್ಮದು ಖುಷ್ಕಿ ಜಮೀನು ಎಂದರೆ ಸರಿಯಲ್ಲ ಆದರೆ ಬೋರ್ ವೆಲ್ ಕೊರೆಯಿಸಿದ್ದೇವೆ. ನಮ್ಮ ಮತ್ತು ಒಬ್ಬ ಮೋಹನ್ ಕುಮಾರ್ ಎನ್ನುವವರ ಹೆಸರುಗಳು ಪಹಣಿಯಲ್ಲಿ ಜಂಟಿಯಾಗಿವೆ ಎಂದರೆ ಸರಿ ಆದರೆ ನಮ್ಮದೇ ಬೇರೆ ಜಮೀನು ತೋರಿಸಲಾಗಿದೆ. ನಮ್ಮ ಜಮೀನಿನಲ್ಲಿದ್ದ ಬೋರ್ ವೆಲ್ ಗೆ ಪ್ರತ್ಯೇಕವಾಗಿ ಪರಿಹಾರದ ಹಣ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ನನಗೆ ಮರ ಮತ್ತು ಮಾಲ್ಕಿ ಗಳ ಪರಿಹಾರವಾಗಿ ಒಟ್ಟು ರೂ.4,78,138/– ಗಳನ್ನು ನೀಡಲಾಗಿದೆ ಎಂದರೆ ಸರಿ. ನನಗೆ ಒಟ್ಟು ಪರಿಹಾರವಾಗಿ ರೂ.8,40,619/– ಗಳನ್ನು ದಿನಾಂಕ 02/01/2020 ರಂದು ನೀಡಿದ್ದಾರೆ ಎಂದರೆ ಸರಿ.

ಭೂ ಸ್ವಾಧೀನಗೊಳ್ಳುವ 3 ವರ್ಷಗಳ ಮೊದಲು ಅಲ್ಲಿ ಜಮೀನುಗಳ ಬೆಲೆ ಇದ್ದ ಪ್ರಮಾಣದಲ್ಲಿಯೇ ನಮಗೆ ಸೂಕ್ತ ಪರಿಹಾರದ ಹಣವನ್ನು ನೀಡಿದ್ದಾರೆ ಎಂದರೆ ಸರಿಯಲ್ಲ. ನಿಪಿ–4 ರ ಮಾರುಕಟ್ಟೆ ಬೆಲೆ ದೃಢೀಕರಣ ಪತ್ರವು 2020–21 ನೇ ಸಾಲಿನದು ಎಂದರೆ ಸರಿ. ಭೂ ಸ್ವಾಧೀನದ ಬಗ್ಗೆ ಪ್ರಾಥಮಿಕ

ನೋಟಿಫಿಕೇಶನ್ 2017 ರಲ್ಲಿ ಆಗಿತ್ತು ಎಂದರೆ ಸರಿ. ಸಾಮಾಜಿಕ ನ್ಯಾಯಕ್ಕೆ ಧಕ್ಕೆ ಬಾರದ ರೀತಿಯಲ್ಲಿ ಸೂಕ್ತ ಪರಿಹಾರದ ಹಣ ನೀಡಿದ್ದಾರೆ ಎಂದರೆ ಸರಿಯಲ್ಲ. ಭೂ ಸ್ವಾಧೀನಗೊಂಡ ವರ್ಷದ ಹಾಗೂ ಅದಕ್ಕೂ ಹಿಂದಿನ ವರ್ಷಗಳ ಭೂಮಿಯ ಸೂಕ್ತ ಹೆಚ್ಚುವರಿ ಮಾರುಕಟ್ಟೆ ಬೆಲೆ ತೋರಿಸುವ ಯಾವುದೇ ದಾಖಲಾತಿಗಳನ್ನು ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ಸೂಕ್ತ ಪರಿಹಾರದ ಹಣ ನೀಡಿದ್ದರೂ ಕೂಡ ಸುಳ್ಳು ಮಾಗಣೆಯ ಅರ್ಜಿ ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ – ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.